International Journal of Academic Research
ISSN: 2348-7666; Vol.9, Issue-2(3), February, 2022
Impact Factor: 6.023; Email: drtvramana@yahoo.co.in

# ಮಹಿಳಾ ಚಳವಳಿ : ಜೀವಸಮಾನತೆ ಕಾಳಜಿಯ ಹೋರಾಟ

**ಡಾ. ಗಣೇಶ (ಚಿಕ್ಕಮಗಳೂರು ಗಣೇಶ)**
ಕನ್ನಡ ಸಹ ಪ್ರಾಧ್ಯಾಪಕ
ಸರ್ಕಾರಿ ಪ್ರಥಮ ದರ್ಜೆ ಕಾಲೇಜು
ಕೃಷ್ಣರಾಜನಗರ – ಮೈಸೂರು ಜಿಲ್ಲೆ

## Introduction : ಪೀಠಿಕೆ

ಕರ್ನಾಟಕದ ಸಾಂಸ್ಕೃತಿಕ ಚರಿತ್ರೆಯಲ್ಲಿ ಇಪ್ಪತ್ತನೆಯ ಶತಮಾನದ ಎಪ್ಪತ್ತರ ದಶಕವು ಅತ್ಯಂತ ಕ್ರಿಯಾಶೀಲವಾದ ಕಾಲಘಟ್ಟವಾಗಿದೆ. ಚಾರಿತ್ರಿಕ ಮಹತ್ವದ ಹಲವು ಪಲ್ಲಟಗಳಿಗೆ ಕಾರಣವಾದ ಈ ಕಾಲಮಾನವು ಹೊಚ್ಚ ಹೊಸ ವಿಚಾರ–ಚಿಂತನೆಗಳಿಗೆ ವಿಶೇಷವಾಗಿ ತೆರೆದುಕೊಂಡಿತು. ನಮ್ಮ ಸಮಾಜದ ಕೆಳಮಧ್ಯಮ ಜಾತಿಗಳಿಗೆ, ಅದರಲ್ಲೂ ಮುಖ್ಯವಾಗಿ ದಲಿತ–ಮಹಿಳಾ ಸಮುದಾಯಕ್ಕೆ ಸಂಜೀವಿನಿಯಂತೆ ಒದಗಿಬಂದ ಶಿಕ್ಷಣದ ಅವಕಾಶವು ಈ ಸಮಾಜವನ್ನು ವಿಶ್ಲೇಷಿಸಿ ನೋಡುವ ಹೊಸ ಕಣ್ಣುಗಳನ್ನು ನೀಡಿತು. ಇಂಥ ಹೊಸ ಕಣ್ಣುಗಳನ್ನು ಪಡೆದುಕೊಂಡ ಪರಿಣಾಮವಾಗಿ ಇಲ್ಲಿನ ಮಾನವಪರ ಚಿಂತಕರು, ಸಾಮ್ರಾಜ್ಯವಾದಿ ಬ್ರಿಟಿಷರಿಂದ ಬಿಡುಗಡೆ ಹೊಂದಿ ಬಂಡವಾಳಶಾಹಿಗಳಿಂದ ಆಳಿಸಿಕೊಳ್ಳುತ್ತಿರುವ ಭಾರತದ – ಆ ಮೂಲಕ ಕರ್ನಾಟಕದ ದೀನಸ್ಥಿತಿಗೆ ಅಕ್ಷರಶಃ ವಿಚಲಿತರಾದರು. ತಕ್ಷಣವೇ ಸಾಮೂಹಿಕ ಪ್ರಜ್ಞೆಯನ್ನು ಬಲಗೊಳಿಸಿಕೊಂಡು ಕನ್ನಡ ನೆಲದಲ್ಲಿ ಪರಿವರ್ತನೆಯ ವಾತಾವರಣವನ್ನು ಹಂಬಲಿಸಿದರು ; ಸಾಮ್ರಾಜ್ಯಶಾಹಿ ಭೂಮಾಲೀಕ ಪ್ರಭುಗಳ ವಿರುದ್ಧ ನಿರಂತರ ಹೋರಾಟದಲ್ಲಿ ತೊಡಗಿಕೊಂಡರು. ಹೀಗೆ ವ್ಯವಸ್ಥೆಯ ವಿರುದ್ಧ ಆರಂಭವಾದ ಈ ಹೋರಾಟಗಳು ವೈಚಾರಿಕ ಪ್ರಜ್ಞೆಯನ್ನು ಜಾಗೃತಗೊಳಿಸುವುದರೊಟ್ಟಿಗೆ ವ್ಯವಸ್ಥಿತವಾದ ಸಾಮುದಾಯಿಕ ಚಹರೆಯನ್ನು ಪಡೆದುಕೊಳ್ಳತೊಡಗಿದವು. ಇವೇ ಮುಂದೆ ಕರ್ನಾಟಕದ ಬಹುದೊಡ್ಡ ಸ್ಫೋಟಕ ಚಳವಳಿಯಾದ 'ದಲಿತ–ಬಂಡಾಯ ಚಳವಳಿ'ಯ ಹುಟ್ಟಿಗೆ ಅಡಿಗಲ್ಲು ಹಾಕಿದವು.

ಸಾಂಸ್ಕೃತಿಕ ಅರ್ಥದಲ್ಲಿ 'ದಲಿತ–ಬಂಡಾಯ ಚಳವಳಿ'ಯು ಕನ್ನಡಿಗರ ಸ್ವಾಭಿಮಾನಿ ಹೋರಾಟವಾಗಿದೆ. ಸರಿಸುಮಾರು ಇದೇ ಸಂದರ್ಭದಲ್ಲಿ ಕರ್ನಾಟಕದಲ್ಲಿ ಮಹಿಳಾ ಚಳವಳಿಯು ಜನ್ಮ ತಳೆದುದನ್ನು ನಾವು ನೋಡಬಹುದು. ಅದರ ಹಿನ್ನೆಲೆ ಹಾಗೂ ಮಹತ್ವವನ್ನು ಈ ಮುಂದಿನಂತೆ ವಿಶ್ಲೇಷಿಸಬಹುದು.

## ಅಧ್ಯಯನದ ವ್ಯಾಪ್ತಿ (ಖಛಿಂಠಿಜ)

ಸಾಹಿತ್ಯವೆಂಬುದು ಸಮಾಜದ ಉತ್ಪನ್ನ ಹೇಗೋ, ಹಾಗೇ ಅದೇ ಸಮಾಜದಲ್ಲಿ ಹುಟ್ಟಿಕೊಳ್ಳುವ ಚಳವಳಿಗಳ ಉತ್ಪನ್ನ ಕೂಡ ಆಗಿದೆ. ಅಷ್ಟೇ ಅಲ್ಲ, ಸಾಹಿತ್ಯ ಮತ್ತು ಚಳವಳಿಗಳು ಪರಸ್ಪರ ಪೂರಕವೂ ಉತ್ತೇಜಕವೂ ಆದ ಎರಡು ಪ್ರಮುಖ ಪ್ರಭಾವಿ ಅಂಶಗಳಾಗಿವೆ. 'ಚಳವಳಿ' ಅನ್ನುವುದನ್ನು ನಮ್ಮ ಈವರೆಗಿನ ಸಾಂಪ್ರದಾಯಿಕ ಅರ್ಥ–ವ್ಯಾಖ್ಯಾನಗಳಿಂದ ಬಿಡಿಸಿ ನೋಡಿದಾಗ ಮಾತ್ರ ಇದು ಮನದಟ್ಟಾಗುತ್ತದೆ. ವಿವರಿಸಿ ಹೇಳುವುದಾದರೆ: ಸಾಹಿತ್ಯವು

ಪ್ರಚೋದಿಸುವ ಅಂಶಗಳ ಪರಿಣಾಮವಾಗಿ ಸಮಾಜದಲ್ಲಿ ನಾನಾ ರೂಪದ ಚಳವಳಿಗಳು ಸಂಭವಿಸುತ್ತವೆ. ಅದೇ ರೀತಿ ಇಂತಹ ಚಳವಳಿಗಳು ಒಕ್ಕೊರಲಿನಿಂದ ಮಂಡಿಸುವ ಹಕ್ಕೊತ್ತಾಯಗಳ ಮುಖವಾಣಿಯಾಗಿ ಸಾಹಿತ್ಯ ಸೃಷ್ಟಿಯಾಗುತ್ತದೆ. ಸಾಹಿತ್ಯವು ತಾನು ಕನಸುವ ಆಶಯಗಳನ್ನು ಸಾಕಾರಗೊಳಿಸಲು ಚಳವಳಿಗೆ ಭೂಮಿಕೆಯನ್ನು ಸಿದ್ಧಪಡಿಸಿದರೆ, ಚಳವಳಿಗಳು ತಾವು ಬಯಸುವ ಸಮಸಮಾಜದ ಹಂಬಲವನ್ನು ಸಾಹಿತ್ಯವನ್ನಾಗಿ ರೂಪಿಸುತ್ತವೆ. ಆದ್ದರಿಂದಲೇ ಸಾಹಿತ್ಯದ ನಿರ್ಮಾಣದಲ್ಲಿ ಚಳವಳಿಗಳ ಪಾತ್ರವೂ, ಚಳವಳಿಗಳ ಕಟ್ಟುವಿಕೆಯಲ್ಲಿ ಸಾಹಿತ್ಯದ ಬೆಂಬಲವೂ ಮಹತ್ವದ್ದಾಗಿದೆ. ಈ ಲೇಖನದ ವ್ಯಾಪ್ತಿ ಸಾಹಿತ್ಯವನ್ನು ಅವಲೋಕನಕ್ಕೆ ಒಳಪಡಿಸುವ ಮೂಲಕ ಮಹಿಳಾ ಚಳವಳಿಯ ಪರಿಣಾಮವನ್ನು ಮೌಲ್ಯಮಾಪನ ಮಾಡುವುದೇ ಆಗಿದೆ.

ಮೊದಲಿಗೆ, ಕನ್ನಡ ನೆಲದಲ್ಲಿ ಸಂಭವಿಸಿ ರಾಷ್ಟ್ರದ ಗಮನವನ್ನು ಸೆಳೆದ ಒಟ್ಟು ಸಾಮಾಜಿಕ ಚಳವಳಿಗಳ ಸ್ಥೂಲ ಚಿತ್ರವನ್ನು ಮುಂದಿನ ಪಟ್ಟಿಯಲ್ಲಿ ಕ್ರೋಡೀಕರಿಸಲಾಗಿದೆ:

| **ಕ್ರಮ ಸಂಖ್ಯೆ** | **ಸಾಮಾಜಿಕ ಚಳವಳಿಗಳು** | **ಕಾಲಘಟ್ಟ** | **ಉದ್ದೇಶ/ಆಶಯ** |
|---|---|---|---|
| 1 | ಶರಣ – ಶರಣೆಯರ ಚಳವಳಿ | 12ನೆಯ ಶತಮಾನ | ಜೀವ ಸಮಾನತೆ |
| 2 | ಸ್ವಾತಂತ್ರ್ಯ ಚಳವಳಿ | 19ನೆಯ ಶತಮಾನ | ದಾಸ್ಯ ವಿಮುಕ್ತಿ |
| 2 | ಹಿಂದುಳಿದ ವರ್ಗಗಳ ಹೋರಾಟ | 19ನೆಯ ಶತಮಾನ | ಪ್ರಾತಿನಿಧ್ಯ |
| 4 | ನವೋದಯ ಸಾಹಿತ್ಯ ಚಳವಳಿ | 19ನೆಯ ಶತಮಾನ | ರಾಷ್ಟ್ರೀಯತೆ |
| 5 | ಕನ್ನಡ ನಾಡು–ನುಡಿ ಹೋರಾಟ | 20ನೆಯ ಶತಮಾನ | ಏಕೀಕರಣ |
| 6 | ಪ್ರಗತಿಶೀಲ ಚಳವಳಿ | 20ನೆಯ ಶತಮಾನ | ಶ್ರಮಜೀವಿ ಸಂಘಟನೆ |
| 7 | ನವ್ಯ ಚಳವಳಿ | 20ನೆಯ ಶತಮಾನ | ಅಂತರಂಗ ಶೋಧನೆ |
| 8 | ದಲಿತ ಚಳವಳಿ | 20ನೆಯ ಶತಮಾನ | ಸ್ವಾಭಿಮಾನದ ಪ್ರಜ್ಞೆ |
| 9 | ಬಂಡಾಯ ಚಳವಳಿ | 20ನೆಯ ಶತಮಾನ | ಸಬಾಲ್ಟರ್ನ್ ಪ್ರಾತಿನಿಧ್ಯ |
| 10 | ರೈತ ಚಳವಳಿ | 20ನೆಯ ಶತಮಾನ | ಹಕ್ಕೊತ್ತಾಯ ಮಂಡನೆ |
| 10 | ಮಹಿಳಾ ಚಳವಳಿ | 20ನೆಯ ಶತಮಾನ | ಲಿಂಗ ಸಮಾನತೆ |

| | | | |
|---|---|---|---|
| 11 | ಪರಿಸರ ಚಳವಳಿ | 21 ನೆಯ ಶತಮಾನ | ಜೀವವೈವಿಧ್ಯ ಸಂರಕ್ಷಣೆ |
| 12 | ವಿಜ್ಞಾನ ಚಳವಳಿ | 21 ನೆಯ ಶತಮಾನ | ಮೌಢ್ಯ ನಿವಾರಣೆ |

ಅಧ್ಯಯನ ವಿಧಾನ (Methodology)

ಇತ್ತೀಚಿನ ದಿನಗಳಲ್ಲಿ ಸಾಹಿತ್ಯವನ್ನು ಕೇವಲ ಸಾಹಿತ್ಯಕ ಪರಿಕರಗಳಿಂದಷ್ಟೆ ಅಧ್ಯಯನ ಮಾಡುವ ಪರಿಸ್ಥಿತಿ ಇಲ್ಲ. ಸಾಹಿತ್ಯವು ಇನ್ನಿನ್ನು ಅಂತರ್‌ಪಠ್ಯ, ಅಂತರ್‌ಶಿಸ್ತೀಯ, ಬಹುಶಿಸ್ತೀಯ ಅಧ್ಯಯನಗಳಿಗೆ ಆಕರವಾಗಬಲ್ಲದಾಗಿದೆ. ಒಂದೆಡೆ ಸಾಹಿತ್ಯ ಅನ್ಯಶಿಸ್ತುಗಳ ಅಧ್ಯಯನಕ್ಕೆ ಆಕರವಾದರೆ, ಇನ್ನೊಂದೆಡೆ ತನ್ನ ರೂಪಣಕ್ಕೆ ಬೇರೆ ಬೇರೆ ಶಾಸ್ತ್ರಗಳ ನೆರವನ್ನು ಬಯಸುತ್ತದೆ. ಸಾಹಿತ್ಯದ ನಿರ್ಮಾಣಕ್ರಿಯೆಯು ಏಕರೂಪಿಯಾಗಿರದೆ ಸಮಾಜದ ಬದುಕಿನಿಂದ ಪಡೆದ ಆಚಾರ, ವಿಚಾರ, ಸಾಮಾಜಿಕ, ಧಾರ್ಮಿಕ, ರಾಜಕೀಯ, ಆರ್ಥಿಕ ಅಂಶಗಳನ್ನು ಒಳಗೊಳ್ಳುತ್ತದೆ. ಹೀಗಾಗಿ ಇಂದಿನ ಮಟ್ಟಿಗೆ ಸಾಹಿತ್ಯ ಕೇವಲ ಒಂದು ಕಲಾಕೃತಿಯಾಗಿ ಉಳಿಯದೆ ಸಾಮಾಜಿಕ ಹಾಗೂ ಸಾಂಸ್ಕೃತಿಕವಾದ ವಿಶಿಷ್ಟ ದಾಖಲೆ ಎನ್ನಿಸಿಕೊಳ್ಳುತ್ತಿದೆ.

ಯಾವುದೇ ಒಂದು ಮುಖ್ಯವಾದ ಸಾಹಿತ್ಯಕೃತಿಯು ತನ್ನ ಕಾಲದ ಸಾಮಾಜಿಕ ಚಿತ್ರಣವನ್ನು ಎಷ್ಟರಮಟ್ಟಿಗೆ ನೀಡಿದೆ? ಅಲ್ಲಿನ ಸಂಕಟಗಳು ಮತ್ತು ಸಂಭ್ರಮಗಳಿಗೆ ಎಷ್ಟರಮಟ್ಟಿಗೆ ಪ್ರಾಮಾಣಿಕವಾಗಿ ತೆರೆದುಕೊಂಡಿದೆ? ತನ್ನ ಕಾಲದ ಸಮಾಜಕ್ಕೆ ಅದು ಎಷ್ಟರಮಟ್ಟಿಗೆ ಸಂಗತವೂ, ಮಹತ್ವದ್ದೂ ಆಗಿದೆ? ಸಮಾಜದ ಮೇಲೆ ಆ ನಿರ್ದಿಷ್ಟ ಕೃತಿಯು ಉಂಟುಮಾಡಿರುವ ಪರಿಣಾಮ ಎಂಥದು? ಬದುಕಿನ ಬಗ್ಗೆ ಅದು ಯಾವ ದೃಷ್ಟಿಕೋನವನ್ನು ಬೆಳೆಸಿದೆ? ಕೃತಿಕಾರರ ಒಟ್ಟು ಧೋರಣೆ ಯಾವುದು? ಜೀವಪರವೇ– ಜೀವವಿರೋಧಿಯೇ? ಎಂಬುದನ್ನು ವಿವರವಾಗಿ ಪರಿಶೀಲಿಸಲಾಗುತ್ತಿದೆ. ಹೀಗೆ ಬಹುವಿಧಾನಗಳ ಮುಖಾಂತರ ಸಾಹಿತ್ಯವನ್ನು ಪ್ರವೇಶಮಾಡುತ್ತಿರುವ ಈ ಹೊತ್ತಿನಲ್ಲಿ ತೌಲನಿಕ ಸ್ವರೂಪದ ಅಧ್ಯಯನ ವಿಧಾನಗಳು ಹೆಚ್ಚುತ್ತಿವೆ. ಒಂದಕ್ಕಿಂತ ಹೆಚ್ಚು ಅಧ್ಯಯನ ಘಟಕಗಳನ್ನು ಪರಸ್ಪರ ಹೋಲಿಸಿ ನೋಡುವ – ಅವುಗಳ ನಿರ್ದಿಷ್ಟ ಸ್ಥಾನಮಾನವನ್ನು ನಿರ್ದೇಶಿಸುವ ಘನಕರ್ತವ್ಯ ಈ ವಿಧಾನಗಳದ್ದು. ಅಲ್ಲದೆ ಭಾಷಾಂತರಗಳ ಮೂಲಕ ಪ್ರಪಂಚದ ಯಾವ ಯಾವುದೋ ಅಜ್ಞಾತ ಮೂಲೆಗಳ ಜನಜೀವನ–ಸಾಹಿತ್ಯ–ಸಂಸ್ಕೃತಿಗಳ ಪರಿಚಯ ಆಗುತ್ತಿರುವ ಹಿನ್ನೆಲೆಯಲ್ಲಿ ಕೂಡ ತೌಲನಿಕ ವಿಧಾನಕ್ಕೆ ಸಹಜವಾಗಿ ಮಹತ್ವವಿದೆ. ಪ್ರಸ್ತುತ ಲೇಖನದ ಅಧ್ಯಯನ ವಿಧಾನ ಕೂಡ ತೌಲನಿಕ ಸ್ವರೂಪದ್ದೇ ಆಗಿದೆ.

ಅಧ್ಯಯನದ ವಸ್ತು–ವಿಷಯ (Objectives )

ಪ್ರಕೃತಿಯು ರಚಿಸಿರುವ ಸಕಲ ಸೃಷ್ಟಿಮೂಲಗಳಲ್ಲಿ ಹೆಣ್ಣು ಮತ್ತು ಗಂಡು ಅದರ ಎರಡು ಕಣ್ಣುಗಳೇ ಆಗಿವೆ. ಅಲ್ಲಿ ಲಿಂಗ ತಾರತಮ್ಯವಿಲ್ಲ, ಲಿಂಗವ್ಯತ್ಯಾಸವಿದೆ. ಅದು ಜೀವಭೇದವಲ್ಲ–ಜೈವಿಕ ಭಿನ್ನತೆಯಷ್ಟೆ. ಆದರೆ, ಜೈವಿಕ ಭಿನ್ನತೆಯೊಂದನ್ನೇ ದಾಳವಾಗಿಸಿಕೊಂಡ ಗಂಡು ತಾನು ಪ್ರಬಲನೆಂದೂ ಶ್ರೇಷ್ಠನೆಂದೂ ಸಾರಿಕೊಂಡು, ಹೆಣ್ಣನ್ನು ಕೀಳಾಗಿ–ನಿಕೃಷ್ಟವಾಗಿ ನಡೆಸಿಕೊಳ್ಳುತ್ತಿರುವ ಸನ್ನಿವೇಶವನ್ನು ಪ್ರಪಂಚದ ತುಂಬ ಕಾಣುತ್ತಿದ್ದೇವೆ. ಒಟ್ಟು ಜನಸಂಪತ್ತಿನ ಅರ್ಧದಷ್ಟಿರುವ ಹೆಣ್ಣು ಕುಲವನ್ನು ಹೀಗೆ ಎರಡನೆಯ ದರ್ಜೆಯ ಪ್ರಜೆಯಾಗಿಯೇ ದುಡಿಸಿಕೊಂಡುದರ ಹಿಂದೆ ಸುದೀರ್ಘ ಇತಿಹಾಸವಿದೆ.

ಸ್ತ್ರೀಯನ್ನು ಕುರಿತ ಒಂದು ಸಂಸ್ಕೃತಿಯ ದೃಷ್ಟಿಕೋನಕ್ಕೂ ಆ ಸಂಸ್ಕೃತಿಯನ್ನು ಬದುಕುತ್ತಿರುವ ಸಮಾಜದ ನೈತಿಕ ಚೈತನ್ಯಕ್ಕೂ ನೇರ ಸಂಬಂಧವಿದೆ. ``ಒಂದು ಸಮಾಜದಲ್ಲಿ ಸ್ತ್ರೀಯರಿಗೆ ನೀಡಲಾಗಿರುವ ಸ್ಥಾನಮಾನಗಳು ಆ ಸಮಾಜದ ಸಂಸ್ಕೃತಿಯ ಹಿರಿಮೆಯನ್ನು, ನಾಗರಿಕತೆಯ ಗರಿಮೆಯನ್ನು ಮತ್ತು ಅದರ ಸಾಮಾಜಿಕ, ಆರ್ಥಿಕ, ನೈತಿಕ ಮತ್ತು ಆಧ್ಯಾತ್ಮಿಕ ಮಹಿಮೆಯನ್ನು ಎತ್ತಿತೋರುವ ನಂಬಲರ್ಹವಾದ ಸೂಚಿಯಾಗಿರುತ್ತದೆ''.[1] ಈ ಮಾತುಗಳ ಹಿನ್ನೆಲೆಯಲ್ಲಿ ನೋಡಿದರೆ ಪ್ರಪಂಚದ ಯಾವ ಸಂಸ್ಕೃತಿಯೂ ಮಹಿಳೆಯನ್ನು ಸಮಾನತೆಯಿಂದ ನಡೆಸಿಕೊಂಡ ಉದಾಹರಣೆಗಳು ಸಿಕ್ಕುವುದಿಲ್ಲ. ಅಷ್ಟು ಮಾತ್ರವಲ್ಲ, ``ಹೆಣ್ಣಿನ ಮೇಲೆ ಕೆಂಡದ ಮಳೆ ಸುರಿಸುವಲ್ಲಿ ಯಾವುದೊ ಒಂದೆರಡು ಸಂಸ್ಕೃತಿಗಳಲ್ಲ, ಜಗತ್ತಿನ `ನಾಗರಿಕ' ಎನಿಸಿಕೊಳ್ಳುವ ಬಹುತೇಕ ಸಮಾಜಗಳ ಸಂಸ್ಕೃತಿಗಳು ಕೂಡ ಪಾಲುದಾರವಾಗಿವೆ. ಮನುಸ್ಮೃತಿ, ಬೈಬಲ್, ಅರೇಬಿಯನ್ ನೈಟ್ಸ್ ಕತೆಗಳು, ಶೃಂಗೇರಿ ಮಠದ ಕಡತಗಳು – ಗಡಿಗಳ ಭೇದವೇ ಇಲ್ಲ''.[2]

ಪ್ರಪಂಚದ ಬಹುಮಟ್ಟಿನ ಎಲ್ಲ ಧರ್ಮಗಳು ಒಂದೇ ನಾಲಗೆಯಲ್ಲಿ ಆಡುವ ಮಾತುಗಳೆಂದರೆ: ಹೆಣ್ಣು ಚಂಚಲ ಮನಸ್ಸಿನವಳು, ಕಾಮಪಿಪಾಸು ಗುಣದವಳು, ಗಂಡಿನ ಹೃದಯವನ್ನು ಅಲ್ಲೋಲ ಕಲ್ಲೋಲಗೊಳಿಸುವ ಮಾಯಾವಿ. ಅವಳು ಯಾವುದೇ ರೀತಿಯ ನಂಬಿಕೆ–ವಿಶ್ವಾಸಕ್ಕೆ ಅರ್ಹಳಲ್ಲದವಳು. ಆದ್ದರಿಂದ ಅವಳನ್ನು ಉಗ್ರವಾದ ಕ್ರಮಗಳಿಂದ ನಿಯಂತ್ರಣದಲ್ಲಿ ಇಡಬೇಕಾದುದು ಸಮಾಜ ಮತ್ತು ಅದರ ನೀತಿನಿಯಮಾವಳಿಗಳ ಕರ್ತವ್ಯ. ಅಂತಹ ಉಗ್ರವಾದ ಕ್ರಮಗಳಲ್ಲಿ – ಆಕೆ ಪುರುಷನಿಗೆ ಗುಲಾಮಳಾಗಿರುವುದು, ಭೋಗದ ವಸ್ತುವಾಗಿ ಆತನ ಸೇವೆಯಲ್ಲಿ ಸದಾ ತೊಡಗಿರುವುದು, ಹೊರಜಗತ್ತನ್ನು ಕಣ್ಣೆತ್ತಿ ನೋಡದೆ, ಕಟ್ಟುಪಾಡುಗಳನ್ನು ಪ್ರಶ್ನಿಸದೆ ಮನೆ ಮಕ್ಕಳು ಕುಟುಂಬಗಳ ಸೇವೆಯಲ್ಲೇ ಮುಕ್ತಿಯನ್ನು ಹುಡುಕುವುದು – ಪ್ರಾಥಮಿಕವಾದವುಗಳು.

ಅಧ್ಯಯನದ ಉದ್ದೇಶ (Significance of the Study )

ನಮಗೆಲ್ಲ ತಿಳಿದಿರುವ ಹಾಗೆ, ಪ್ರಪಂಚದ ತುಂಬ ಹಲವು ರೀತಿಯಲ್ಲಿ ತುಳಿತಕ್ಕೆ ಒಳಗಾದ ಶೋಷಿತ ಸಮುದಾಯಗಳಿವೆ. ತಾವು ಹುಟ್ಟಿಬಂದ ವರ್ಗ ಕಾರಣವಾಗಿ, ಇಲ್ಲವೆ ಧರ್ಮ, ಜಾತಿ, ವರ್ಣಗಳು ಕಾರಣವಾಗಿ ಅವರು ಬಗೆಬಗೆಯ ಕಡುಕಷ್ಟಗಳನ್ನು ಅನುಭವಿಸುತ್ತಿದ್ದಾರೆ. ಇವೆಲ್ಲಕ್ಕಿಂತಲೂ ಶೋಚನೀಯವಾದ, ದುರದೃಷ್ಟಕರವಾದ

**International Journal of Academic Research**
**ISSN: 2348-7666; Vol.9, Issue-2(3), February, 2022**
**Impact Factor: 6.023; Email: drtvramana@yahoo.co.in**

ಶೋಷಿತ ವರ್ಗವೆಂದರೆ ಮಹಿಳೆಯರದ್ದು. ಅವರು ಮೇಲ್ನಾಣಿಸಿದ ಎಲ್ಲ ಹಿನ್ನೆಲೆಯ ಶೋಷಿತರಿಂದಲೂ ಮತ್ತು ಅವರ ಸಂಕಟಮಯ ಪರಿಸ್ಥಿತಿಗೆ ಮೂಲಕಾರಣರಾದ ಶೋಷಕರಿಂದಲೂ ಏಕಕಾಲದಲ್ಲಿ ದೌರ್ಜನ್ಯಕ್ಕೆ ಒಳಗಾಗುತ್ತಿದ್ದಾರೆ. ಈ ಅರ್ಥದಲ್ಲಿ ಮಹಿಳೆಯರು ಶೋಷಿತರಲ್ಲಿ ಶೋಷಿತರು. ಆದ್ದರಿಂದಲೇ ಇತ್ತೀಚಿನ ದಿನಗಳಲ್ಲಿ ಅವರನ್ನು 'ಪದದಲಿತರು' ಎಂಬಂತೆ ಗುರುತಿಸಲಾಗುತ್ತಿದೆ. ಈ ಹಿನ್ನೆಲೆಯಿಂದ ನೋಡಿದರೆ, 'ಮಹಿಳಾ ಶೋಷಣೆ' ಎಂಬುದು ಪ್ರಪಂಚದ ಬೇರೆಲ್ಲ ಶೋಷಣೆಗಳಿಗಿಂತ ಭಿನ್ನವಾದುದೂ, ಅತ್ಯಂತ ದುರಂತಮಯವಾದುದೂ ಆಗಿದೆ.

ಹೀಗೆ ಮಹಿಳೆ, ಹೊನ್ನು-ಮಣ್ಣುಗಳ ಜೊತೆಯಲ್ಲಿ ಭೋಗದ ವಸ್ತುವಾಗಿ, ಸಾಧಕರನ್ನು ಕಾಡುವ ಮಾಯೆಯಾಗಿ, ಕಾಮದ ಗೊಂಬೆಯಾಗಿ ಪರಿಗಣಿಸಲ್ಪಟ್ಟು ದಲಿತರಿಗಿಂತ ನಿಕೃಷ್ಟವಾಗಿ ಬದುಕಿಕೊಂಡು ಬಂದಿರುವುದಕ್ಕೆ ಭಾರತದ ಎಲ್ಲ ಪುರಾಣ ಪುಣ್ಯಕಥೆಗಳಲ್ಲಿಯೂ ಸಾಕಷ್ಟು ನಿದರ್ಶನಗಳು ದೊರೆಯುತ್ತವೆ. ಮನುಸ್ಮೃತಿ, ರಾಮಾಯಣ, ಮಹಾಭಾರತ, ಭಾಗವತ, ಭಗವದ್ಗೀತೆಗಳೆಲ್ಲವೂ ಮಹಿಳೆಯರ ಅಂದಂದಿನ ದುರಂತ ಬದುಕಿನ ಸ್ಥಿತಿಗೆ ಹಿಡಿದ ಕನ್ನಡಿಯಾಗಿವೆ: 'ನ ಸ್ತ್ರೀ ಸ್ವಾತಂತ್ರ್ಯಂ ಅರ್ಹತಿ' ಎಂದು ಹೇಳುವ ಮುಖೇನ ಮನು ಮಹಿಳೆಯ ಶೋಷಣೆಗೆ ಭೀಕರ ಮುನ್ನುಡಿಯನ್ನು ಬರೆದಿದ್ದಾನೆ. ರಾಮಾಯಣದಲ್ಲಿ ಹೆಣ್ಣಾಗಿ ಹುಟ್ಟಿದ ಕಾರಣಕ್ಕಾಗಿಯೇ ಸೀತೆ ಅನುಭವಿಸಿದ ನೋವು-ಅಪಮಾನಗಳು ಓದುಗರ ಮನಕಲುಕುತ್ತವೆ. ವೀರಾಧಿವೀರ ರಾವಣ ಆಕೆಯನ್ನು ಪ್ರತಿಷ್ಠೆಗಾಗಿ ಅಪಹರಿಸಿದರೆ, ಮರ್ಯಾದಾ ಪುರುಷೋತ್ತಮ ಶ್ರೀರಾಮ ಉರಿವ ಬೆಂಕಿಗೆ ನೂಕುತ್ತಾನೆ. ಅಲ್ಲದೆ ತುಂಬು ಗರ್ಭಿಣಿಯಾಗಿದ್ದ ಸಂದರ್ಭದಲ್ಲಿ ಆಕೆಯನ್ನು ನಿರ್ದಯವಾಗಿ ಕಾಡಿಗೆ ಅಟ್ಟುತ್ತಾನೆ. ಮಹಾಭಾರತದ ದ್ರೌಪದಿಯಂತೂ ಜೂಜಿನ ವಸ್ತುವಾಗಿ, ಪ್ರಾಜ್ಞರುಗಳು ತುಂಬಿದ ಸಭೆಯಲ್ಲೇ ನಿಸ್ಸಹಾಯಕಳಾಗಿ ವಸ್ತ್ರಾಪಹರಣಕ್ಕೆ ಒಳಗಾಗುತ್ತಾಳೆ. ಇನ್ನು ಕಡು ಕೋಪಿಷ್ಠ ಜಮದಗ್ನಿಯ ಮಡದಿ ರೇಣುಕೆ ಹೆತ್ತ ಮಗನಿಂದಲೇ ಕೊಲ್ಲಲ್ಪಡುತ್ತಾಳೆ. ಹೀಗೆ ಭಾರತೀಯ ಧರ್ಮ ಮತ್ತು ಕಾವ್ಯಧರ್ಮವನ್ನು ಹೆಮ್ಮೆಯಿಂದ ಸಾರುವ ಗ್ರಂಥಗಳೆಲ್ಲವೂ ಮಹಿಳೆಯ ಶೋಚನೀಯ ಬದುಕಿನ ಚರಿತ್ರೆಯನ್ನು ಆದರ್ಶದ ನೆಲೆಯಲ್ಲಿ ಬಿಂಬಿಸುತ್ತವೆ.

ಹೀಗೆ ನಮ್ಮ ಭಾರತೀಯ ಸಮಾಜವು ಮಹಿಳೆಯನ್ನು ಹಲವಾರು ನಿಯಂತ್ರಣಗಳ ಅಡಿಯಲ್ಲಿ ನಡೆಸಿಕೊಂಡಿದೆ. ಅಲ್ಲದೆ ನಿಯಂತ್ರಣದ ಎಲ್ಲ ನೆಲೆಗಳನ್ನು ಆದರ್ಶದ ಹೆಸರಿನಲ್ಲಿ ವೈಭವೀಕರಿಸಿದೆ. ಸಮಾಜದಲ್ಲಿ ಪುರುಷನ ಮೇಲ್ಮೆಯನ್ನು ಪ್ರಬಲವಾಗಿ ಸ್ಥಾಪಿಸಲು ಪ್ರಾರಂಭವಾದಾಗಿನಿಂದ, ಆತನ ಆಶಯಗಳು ಮತ್ತೆ ಮತ್ತೆ ಚಾಲನೆಗೊಂಡು ಕ್ರಮೇಣ ಮಹಿಳೆಯ ಅಸ್ತಿತ್ವವು ಮೂಲೆಗುಂಪಾಗುತ್ತಾ ಹೋಯಿತು ಎನ್ನಬಹುದು. ಆಕೆಯ ವೈಯಕ್ತಿಕ, ಕೌಟುಂಬಿಕ ಮತ್ತು ಸಾಮೂಹಿಕ ನೆಲೆಯ ಮೂರೂ ಗ್ರಹಿಕೆಗಳ ಪುರುಷನ ಇಚ್ಛೆಯನ್ನೇ ಆಧರಿಸಿದ್ದಾಗಿದೆ. ಅದು ಬಾಲ್ಯದಲ್ಲಿ ಪೋಷಕರ ಅಧೀನದಲ್ಲಿ. ಯೌವನದಲ್ಲಿ ಗಂಡನ ಅಧೀನದಲ್ಲಿ, ಇಳಿಗಾಲದಲ್ಲಿ ಮಕ್ಕಳ ಅಧೀನದಲ್ಲಿ ಮಹಿಳೆ ತನ್ನ ಅಸ್ತಿತ್ವವನ್ನು ಗುರುತಿಸಿಕೊಳ್ಳಬೇಕೆಂದು ಬಯಸುತ್ತದೆ. ಹಾಗೆ ಬದುಕನ್ನು ತನಗಾಗಿ ರೂಪಿಸಿಕೊಳ್ಳುವುದಕ್ಕಿಂತ ಬೇರೆಯವರಿಗಾಗಿಯೇ ಉದ್ದಕ್ಕೂ ಮೀಸಲಾಗಿಟ್ಟ ಮಹಿಳೆಯ ಸ್ಥಾನವು ಸಮಾಜವು ನಿರ್ದಿಷ್ಟಪಡಿಸಿದ ಕೇಂದ್ರದಿಂದ ಮೇಲೇರದಂತೆ ಮಾಡಿಬಿಟ್ಟಿತು. ಆದರೆ ಇಂಥ ಸ್ಥಿತಿಯು ಮಹಿಳೆಯ ಯಾವ ವಿರೋಧವೂ ಇಲ್ಲದೆ ಒಪ್ಪಿಕೊಳ್ಳುವಾಗ ಮಾತ್ರ ಸಲೀಸಾಗಿ ನಡೆಯುವಂಥದು.

ಮಹಿಳೆಯನ್ನು ಕುರಿತು ಸೃಷ್ಟಿಸಲಾಗಿರುವ ಇಂತಹ ಊಳಿಗಮಾನ್ಯ ನಂಬಿಕೆಗಳ ವಿರುದ್ಧ ನಮ್ಮಲ್ಲಿ ಪ್ರತಿರೋಧಗಳು, ಪ್ರತಿಭಟನೆಗಳು ಕಾಣಿಸಿಕೊಂಡದ್ದು ತೀರಾ ಇತ್ತೀಚೆಗೆ. ಪ್ರಪಂಚದ ತುಂಬಾ 'ಸಮಸುಖ–ಸಮದುಃಖಿ'ಗಳಾಗಿರುವ ಮಹಿಳಾಲೋಕವು ಹೀಗೆ ಒಂದಾಗಿ ಕೂಡಿ ಮಿಡಿಯುವ ಪ್ರೇರಣೆಯನ್ನೂ ಒತ್ತಾಸೆಯನ್ನೂ ನೀಡಿದ್ದು ಪಾಶ್ಚಾತ್ಯ ಮೂಲದ 'ಸ್ತ್ರೀವಾದ' ಎನ್ನಬಹುದು. ಇಪ್ಪತ್ತನೆಯ ಶತಮಾನದ ಕೊನೆಯ ದಶಕಗಳಲ್ಲಿ ಹುಟ್ಟಿದಂತಹ ಸ್ತ್ರೀವಾದವನ್ನು 'ಮಹಿಳಾ ಚಳವಳಿಯ ಸೈದ್ಧಾಂತಿಕ ಬೆನ್ನೆಲುಬು' ಎಂದೇ ಕರೆಯಬಹುದು. ಮನುಕುಲದ ಏಕತೆಯನ್ನು ಹಾಗೂ ಸಮಾನತೆಯನ್ನು ಕಾಪಾಡುವುದು ಸ್ತ್ರೀವಾದದ ಮೂಲ ತಾತ್ತ್ವಿಕತೆಯಗಿದೆ. ಅದು ಮುಖ್ಯವಾಗಿ ಮಹಿಳೆಯ ದೇಹ ಮತ್ತು ಮನಸ್ಸನ್ನು ಪುರುಷಾಧೀನವಾಗಿಸಿದ, ಅವಳ ದುಡಿಮೆ ಹಾಗೂ ತಾಯ್ತನದ ಹಕ್ಕನ್ನು ಹತೋಟಿಯಲ್ಲಿಟ್ಟುಕೊಂಡಿರುವ ವ್ಯವಸ್ಥೆಯನ್ನು ಪ್ರಶ್ನಿಸಲು ಪ್ರಾರಂಭಿಸಿತು. ಪಾಶ್ಚಾತ್ಯ ಶಿಕ್ಷಣ ಮತ್ತು ಚಿಂತನಕ್ರಮಗಳಿಂದ ರೂಪು ತಳೆದ ಸ್ತ್ರೀವಾದವು ತದನಂತರ ಬೇರೆ ಬೇರೆ ಸಮಾಜಗಳಲ್ಲಿ ಬೇರೆ ಬೇರೆ ರೂಪದಲ್ಲಿ ವ್ಯಾಪಿಸಿಕೊಂಡಿತು.

ಕರ್ನಾಟಕಕ್ಕೆ ಸಂಬಂಧಿಸಿದಂತೆ ಸೂಕ್ಷ್ಮವಾಗಿ ಅವಲೋಕಿಸಿದರೆ, ಮಹಿಳಾ ಚಳವಳಿಯ ಆರಂಭವನ್ನು 12ನೆಯ ಶತಮಾನದ ವಚನ ಚಳವಳಿಯ ಒಡಲಲ್ಲಿಯೇ ಗುರುತಿಸಬಹುದು. ಅಲಕ್ಷಿತ ಹಿನ್ನೆಲೆಯ ಸಮಾನಮನಸ್ಕರು ಲಿಂಗಭೇದಗಳ ಹಂಗಿಲ್ಲದೆ ಒಂದು ಕಡೆ ಸೇರುವ, ಯಾಜಮಾನ್ಯ ವ್ಯವಸ್ಥೆಯ ವಿರುದ್ಧ ಪ್ರತಿರೋಧಗಳನ್ನು ಮುಕ್ತವಾಗಿ ಚರ್ಚಿಸುವ ಅವಕಾಶವನ್ನು ಈ ಚಳವಳಿಯು ಒದಗಿಸಿತ್ತು. ಅಲ್ಲಿನ ಮುಕ್ತಚರ್ಚೆಯ ವೇದಿಕೆಯಾದ 'ಅನುಭವ ಮಂಟಪ'ದಲ್ಲಿ ಕಾಳವ್ವೆಯಂತಹ ಜ್ಞಾನಿಯನ್ನೂ, ಆಯ್ದಕ್ಕಿ ಲಕ್ಕಮ್ಮನಂತಹ ಪ್ರಾಮಾಣಿಕ ಭಕ್ತೆಯನ್ನೂ, ಸೂಳೆ ಸಂಕವ್ವಳಂತಹ ನಿರ್ಲಕ್ಷಿತ ಮಹಿಳೆಯನ್ನೂ ಒಟ್ಟಾಗಿ ಸೇರಿಸಿದುದೇ ದೊಡ್ಡ ಕ್ರಾಂತಿಯಾಗಿತ್ತೆನ್ನಬಹುದು. ಅಂತಹ ಮುಕ್ತ ವೇದಿಕೆಯಿಂದ ಬಂದು,  ಸಂಪ್ರದಾಯಸ್ಥ ಜಡಮನಸ್ಸಿನ 'ಗಂಡರನು ಒಯ್ದು ಒಲೆಯೊಳಗಿಕ್ಕು' ಎಂದು ದಿಟ್ಟವಾಗಿ ಸಾರಿದ ಅಕ್ಕಮಹಾದೇವಿ ಮಹಿಳಾಚಳವಳಿಯ ನಾಯಕಿಯಂತೆ ಕಾಣುವುದು ಹೆಮ್ಮೆಯ ಸಂಗತಿ. ಆಶ್ಚರ್ಯವೆಂದರೆ, ಆ ಹೊತ್ತಿಗೆ ಇಷ್ಟೊಂದು ಪ್ರಖರವಾಗಿ ಕೇಳಿದ ಮಹಿಳಾದನಿ ತದನಂತರದಲ್ಲಿ ಕ್ಷೀಣವಾಗುತ್ತಾ ಹೋದುದು ವಿಲಕ್ಷಣವೆನ್ನಿಸುತ್ತದೆ.

ಮಹಿಳೆಯರ ಒಗ್ಗಟ್ಟಿಗೆ ಮತ್ತೊಂದು ವಿಶಾಲ ಅವಕಾಶ ಸೃಷ್ಟಿಯಾದದ್ದು, 19ನೆಯ ಶತಮಾನದಲ್ಲಿ ಮುಕ್ತವಾಗಿ ತೆರೆದುಕೊಂಡ ಸಾರ್ವತ್ರಿಕ ಶಿಕ್ಷಣದ ಸೌಲಭ್ಯಗಳಿಂದ ಎನ್ನಬಹುದು. ಜೊತೆಗೆ ಗಾಂಧೀಜಿ ನೇತೃತ್ವದಲ್ಲಿ ಆರಂಭಗೊಂಡ ಸ್ವಾತಂತ್ರ್ಯ ಚಳವಳಿ ಮಹಿಳೆಯರ ಆತ್ಮಾಭಿಮಾನವನ್ನು ಬಡಿದೆಬ್ಬಿಸಿತು.  ಅಂಬೇಡ್ಕರ್ ಸೃಷ್ಟಿಸಿದ ಸಂವಿಧಾನಾತ್ಮಕ ಪರಿಹಾರಗಳು ಮಹಿಳೆಯರ ಅಸ್ತಿತ್ವವನ್ನು ಗಟ್ಟಿಗೊಳಿಸಿದವು. ಅಲ್ಲಿಂದ ಮುಂದೆ ಕನ್ನಡ ಸಾಹಿತ್ಯಕ್ಕೆ ಸೀಮಿತಗೊಳಿಸಿ ಹೇಳಬಹುದಾದರೆ: ನವೋದಯ, ಪ್ರಗತಿಶೀಲ ಸಾಹಿತ್ಯ ಚಳವಳಿಗಳು ಮಹಿಳೆಯ ಆಂತರ್ಯವನ್ನು ಮುಟ್ಟುವ ಪ್ರಯತ್ನ ಮಾಡಿದವು. ಆದರೆ ಮಹಿಳೆಯರಲ್ಲಿ ಹೊಸರೀತಿಯ ಎಚ್ಚರ ಮೂಡಲು ದಲಿತ–ಬಂಡಾಯ ಸಾಹಿತ್ಯ ಚಳವಳಿಯು ಕೊಟ್ಟ ಪ್ರೇರಣೆ ಮಹತ್ತರವಾದದ್ದೆನ್ನಬಹುದು.

ದಲಿತ–ಬಂಡಾಯದ ಪ್ರೇರಣೆಯ ತರುವಾಯ ಕನ್ನಡದಲ್ಲಿ ಮಹಿಳಾಸಂವೇದನೆಯ ಒಂದು ಹೊಸಯುಗವೇ ಶುರುವಾದಂತೆ ಲೇಖಕಿಯರು ಸೃಷ್ಟಿಯಾಗುತ್ತಿರುವುದು ಆರೋಗ್ಯಕರ ಬೆಳವಣಿಗೆ. ಇದರೊಂದಿಗೆ ಅಂಬೇಡ್ಕರರ

International Journal of Academic Research
ISSN: 2348-7666; Vol.9, Issue-2(3), February, 2022
Impact Factor: 6.023; Email: drtvramana@yahoo.co.in

ಚಿಂತನೆಗಳು, ಎಡಪಂಥೀಯ ಕಾರ್ಮಿಕ ಹೋರಾಟಗಳು, ದುಡಿಯುವ ವರ್ಗದ ಮಹಿಳೆಯರ ಚಳವಳಿಗಳು, ವಿದ್ಯಾರ್ಥಿ ಚಳವಳಿಗಳು, ಸಮತಾ ವೇದಿಕೆಯಂತಹ ಸಮಾನತೆಯ ಹೋರಾಟದ ಒಕ್ಕೂಟಗಳು, ಅಚಲ, ವನಿತಾ, ಮಾನಸ, ಜಾಗೃತಿ, ಜನವಾದಿ ಮುಂತಾದ ಕ್ರಾಂತಿಕಾರಿ ಮಹಿಳಾ ಪತ್ರಿಕೆಗಳು, ಜೊತೆಗೆ ಕಾಲಕಾಲಕ್ಕೆ ಸ್ತ್ರೀಪರವಾಗಿ ಜಾರಿಗೊಂಡ ಹತ್ತಾರು ಕಾನೂನುಗಳು ಲಿಂಗಸಮಾನತೆಯ ಹೋರಾಟಕ್ಕೆ ಬೆನ್ನಾಸರೆಯಾಗಿ ದುಡಿದವೆನ್ನಬಹುದು.

## ಉಪಸಂಹಾರ (Conclusion)

ಕನ್ನಡ ಸಾಹಿತ್ಯದ ನಿಟ್ಟಿನಲ್ಲಿ ಗಮನಿಸುವುದಾದರೆ, ಹೊಸ ಎಚ್ಚರದ ಮಹಿಳಾದನಿಗಳು ಒಂದು ಅಪೂರ್ವ ಆಯಾಮವನ್ನು ಸೃಷ್ಟಿಮಾಡಿದವು. ಕನ್ನಡ ಸಾಹಿತ್ಯದ ಮೂಲ ಜೀವಾಳವಾದ ಜೀವಪ್ರೇಮಿ ಚಿಂತನೆಯು ಇದರಿಂದ ಬಹುನೆಲೆಗಳಿಗೆ ಸಾಕಷ್ಟು ವಿಸ್ತರಿಸಿಕೊಂಡಿತು. ಸಂಪ್ರದಾಯಬದ್ಧವಾದ ಎಲ್ಲ ಆವರಣಗಳಿಂದ ಬಿಡಿಸಿಕೊಂಡು ಮುಕ್ತವಾಗಿ ಬದುಕುವ ಸದಾಶಯದ ಚಿಂತನೆಗಳಿಗೆ ಹೊಸ ಬೆಂಬಲವೂ-ಹುರುಪೂ ದಕ್ಕಿತು. ಮೂಲತಃ ಜೀವಸಮಾನತೆಯ ಹಕ್ಕೊತ್ತಾಯವನ್ನು ಪ್ರತಿಪಾದಿಸುವ ಮಹಿಳಾಚಳವಳಿಗಳ ಪ್ರಭಾವದಿಂದ ಅದುವರೆಗಿನ ಪುರುಷನಿಷ್ಠ ಸಾಹಿತ್ಯವು ಶಾಕ್ ಟ್ರೀಟ್‌ಮೆಂಟ್‌ಗೆ ಒಳಗಾಯಿತು. ಜೀವಾನುಕಂಪ, ಜೀವಕಾರುಣ್ಯ, ಜೀವಮೈತ್ರಿಯಂತಹ ಉದಾರಮೌಲ್ಯಗಳು ಹೆಚ್ಚು ಹೆಚ್ಚಾಗಿ ಸಾಹಿತ್ಯದ ಮೂಲಕ ದಟ್ಟವಾಗತೊಡಗಿದವು.

ಎಲ್ಲಕ್ಕಿಂತ ಮುಖ್ಯವಾಗಿ, ಕನ್ನಡ ಲೋಕವನ್ನು ಹೆಂಗಣ್ಣುಗಳ ಮೂಲಕ ಹೊಸಕೋನಗಳಿಂದ ನೋಡಿಕೊಟ್ಟ ನಂಜನಗೂಡು ತಿರುಮಲಾಂಬ, ಶ್ಯಾಮಲಾದೇವಿ ಬೆಳಗಾಂವಕರ, ಎಂ.ಕೆ.ಇಂದಿರಾ, ತ್ರಿವೇಣಿ, ಅನುಪಮಾ ನಿರಂಜನ, ಕೊಡಗಿನ ಗೌರಮ್ಮ, ವಿಜಯಾದಬ್ಬೆ, ಸಾ.ರಾ.ಅಬೂಬಕ್ಕರ್, ಗೀತಾನಾಗಭೂಷಣ, ವೀಣಾ ಶಾಂತೇಶ್ವರ, ಲಲಿತಾನಾಯಕ್, ವೈದೇಹಿ, ಬಾನುಮುಷ್ತಾಕ್, ಸವಿತಾನಾಗಭೂಷಣ, ಸರ್ವಮಂಗಳಾಬಾಯಿ, ಸುಮಿತ್ರಾಬಾಯಿ, ಪ್ರತಿಭಾ ನಂದಕುಮಾರ್, ಸ.ಉಷಾ, ಮಲ್ಲಿಕಾ ಘಂಟಿ, ಎಚ್.ಎಲ್. ಪುಷ್ಪ, ದು. ಸರಸ್ವತಿ, ಪ್ರೀತಿ ಶ್ರೀಮಂಧರ ಕುಮಾರ್, ಎಂ.ಎಸ್.ಆಶಾದೇವಿ, ಸಬೀಹಾ, ಎಂ.ಆರ್.ಕಮಲ, ಎಚ್.ಎಸ್.ಅನುಪಮಾ ಅವರಂಥ ಸ್ಪಂದನಶೀಲ ಪ್ರತಿಭೆಗಳು ಕನ್ನಡಕ್ಕೆ ವಿಶೇಷವಾಗಿ ದೊರಕಿದರು ಎನ್ನಬಹುದು.

## ಕೊನೆಟಿಪ್ಪಣಿಗಳು

1. *ಉದ್ಧೃತ : ಬೇಂದ್ರೆಯವರ ಸಾಹಿತ್ಯದಲ್ಲಿ ಸ್ತ್ರೀ–ಒಂದು ಅಧ್ಯಯನ ; 2006, ಪು.ಸಂ. 06*
2. *ರಹಮತ್ ತರೀಕೆರೆ : ಮರದೊಳಗಣ ಕಿಚ್ಚು ; 2002, ಪು.ಸಂ. 204*

## ಪರಾಮರ್ಶನ ಸಾಹಿತ್ಯ

1. **ಶತಮಾನದ ವಿಮರ್ಶೆ – (ಸಂ) ಎಚ್.ಎಸ್. ರಾಘವೇಂದ್ರರಾವ್**
2. **ಕನ್ನಡ ಸಾಹಿತ್ಯ ಪುನರ್ ಮೌಲೀಕರಣ ಸಂಪುಟಗಳು – (ಸಂ) ಬರಗೂರು ರಾಮಚಂದ್ರಪ್ಪ**
3. **ಕನ್ನಡ ಸಾಹಿತ್ಯ ಮೀಮಾಂಸೆ – (ಸಂ) ಸಬಿಹಾ ಭೂಮಿಗೌಡ**